ದೂರವಾಣಿ ಸಂಖ್ಯೆ: 080–22212343
ಫ್ಯಾಕ್ಸ್ ಸಂಖ್ಯೆ: 080–22278803

ಅಂತರ್ಜಾಲ: https://kptcl.karnataka.gov.in
ಮಿಂಚಂಚೆ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್) : ಯು40109ಕೆಎ1999ಎಸ್‌ಜಿ025521**
**(ಕಂಪನಿಯ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009)**

**ಸಂಖ್ಯೆ : ಕವಿಪ್ರನಿನಿ/ಬಿ103/25303/2021–22** **ದಿನಾಂಕ :** – 8 NOV 2021

## ಅಧಿಸೂಚನೆ

**ವಿಷಯ:** ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ನೌಕರರ ನೇಮಕಾತಿ (ಅನುಕಂಪ ಆಧಾರದ ನೇಮಕಾತಿ) ನಿಬಂಧನೆಗಳು, 1997 ಕ್ಕೆ ತಿದ್ದುಪಡಿ ಮಾಡುವ ಬಗ್ಗೆ.

**ಉಲ್ಲೇಖ :** ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 26 ಸೇಅನೇ 2018, ದಿನಾಂಕ: 09.04.2021.

*****

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ನೌಕರರ ನೇಮಕಾತಿ (ಅನುಕಂಪ ಆಧಾರದ ನೇಮಕಾತಿ) ನಿಬಂಧನೆಗಳು, 1997 ಕ್ಕೆ ಈ ಕೆಳಕಂಡ ತಿದ್ದುಪಡಿ ಮಾಡಲು ಇಚ್ಛಿಸುತ್ತದೆ:

1. **ಶೀರ್ಷಿಕೆ ಮತ್ತು ಪ್ರಾರಂಭ:–**

(1) ಈ ನಿಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ನೌಕರರ ನೇಮಕಾತಿ (ಅನುಕಂಪ ಆಧಾರದ ನೇಮಕಾತಿ) (ತಿದ್ದುಪಡಿ) ನಿಬಂಧನೆಗಳು, 2021 ಎಂದು ಕರೆಯತಕ್ಕದ್ದು.

(2) ಈ ತಿದ್ದುಪಡಿಯು, ದಿನಾಂಕ: 09.04.2021 ರಿಂದ ಅನ್ವಯವಾಗುವಂತೆ ಜಾರಿಗೆ ಬರುತ್ತದೆ.

2. **ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ನೌಕರರ ನೇಮಕಾತಿ (ಅನುಕಂಪ ಆಧಾರದ ನೇಮಕಾತಿ) ನಿಬಂಧನೆಗಳು, 1997 ಕ್ಕೆ ತಿದ್ದುಪಡಿ:**

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ನೌಕರರ ನೇಮಕಾತಿ (ಅನುಕಂಪ ಆಧಾರದ ನೇಮಕಾತಿ) ನಿಬಂಧನೆಗಳು, 1997 ರ ನಿಯಮ 2, 3, 4, 5 ಮತ್ತು 6 ಗಳಿಗೆ ಈ ಅಧಿಸೂಚನೆಗೆ ಲಗತ್ತಿಸಿರುವ ಅನುಬಂಧದಲ್ಲಿ ತಿಳಿಸಿರುವಂತೆ ತಿದ್ದುಪಡಿ ಮಾಡಲಾಗಿದೆ.

"ನಿಗಮದ ನಿರ್ದೇಶಕರುಗಳ ಸಭೆಯ ಅನುಸಮರ್ಥನೆಗೆ ಒಳಪಟ್ಟಿರುತ್ತದೆ"

**ನಿರ್ದೇಶಕರು**
**(ಆಡಳಿತ ಮತ್ತು ಮಾನವ ಸಂಪನ್ಮೂಲ)**

**ಗೆ :**

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.
2. ಎಲ್ಲಾ ನಿರ್ದೇಶಕರು (ತಾಂತ್ರಿಕ), ಕವಿಪ್ರನಿನಿ/ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
5. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

https://kptcl.karnataka.gov.in/ for information of:

6. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
8. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ :**

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜನಿಯರ್‌ಗಳ ಸಂಘ, ಬೆಂಗಳೂರು, ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ(ನೋಂದಣಿ ಸಂಖ್ಯೆ: 659), ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಪಿಂಚಣಿದಾರರ ಸಂಘ, ಕಾವೇರಿ ಭವನ, ಬೆಂಗಳೂರು.

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ103/25303/2021–22, ದಿನಾಂಕ: 8 NOV 2021 ಅನುಬಂಧ**

**ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ನೌಕರರ ನೇಮಕಾತಿ (ಅನುಕಂಪ ಆಧಾರದ ನೇಮಕಾತಿ) ನಿಬಂಧನೆಗಳು, 1997 ಕ್ಕೆ ತಿದ್ದುಪಡಿ**

| ನಿಯಮ/ ಉಪನಿಯಮ | ಹಾಲಿ ಚಾಲ್ತಿಯಲ್ಲಿರುವುದು | ತಿದ್ದುಪಡಿಯಾಗಿರುವುದು |
|---|---|---|
| 2(ಎ) | i. ನಿಗಮದ ಮೃತ ಪುರುಷ ನೌಕರನ ಅವಲಂಬಿತ ಎಂದರೆ, ಆತನಿಗೆ ಅವಲಂಬಿತರಾಗಿದ್ದ ಮತ್ತು ಆತನೊಂದಿಗೆ ವಾಸವಾಗಿದ್ದ ಆತನ ವಿಧವಾ ಪತ್ನಿ, ಮಗ ಮತ್ತು ಅವಿವಾಹಿತ/ವಿಧವೆ ಮಗಳು:<br>ii. ನಿಗಮದ ಮೃತ ಮಹಿಳಾ ನೌಕರಳ ಅವಲಂಬಿತ ಎಂದರೆ, ಆಕೆಗೆ ಅವಲಂಬಿತರಾಗಿದ್ದ ಮತ್ತು ಆಕೆಯೊಂದಿಗೆ ವಾಸವಾಗಿದ್ದ ಆಕೆಯ ವಿಧುರ ಪತಿ, ಮಗ, ಅವಿವಾಹಿತ/ವಿಧವೆ ಮಗಳು:<br>iii. ನಿಗಮದ ಮೃತ ಅವಿವಾಹಿತ ಪುರುಷ ನೌಕರನ ಅವಲಂಬಿತ ಎಂದರೆ, ಆತನಿಗೆ ಅವಲಂಬಿತರಾಗಿದ್ದ ಮತ್ತು ಆತನೊಂದಿಗೆ ವಾಸವಾಗಿದ್ದ ಆತನ ಅವಿವಾಹಿತ ಸಹೋದರ ಅಥವಾ ಅವಿವಾಹಿತ ಸಹೋದರಿ ಅಥವಾ ವಿಧವಾ ಸಹೋದರಿ:<br>iv. ನಿಗಮದ ಮೃತ ಅವಿವಾಹಿತ ಮಹಿಳಾ ನೌಕರಳ ಅವಲಂಬಿತ ಎಂದರೆ, ಆಕೆಗೆ ಅವಲಂಬಿತರಾಗಿದ್ದ ಮತ್ತು ಆಕೆಯೊಂದಿಗೆ ವಾಸವಾಗಿದ್ದ ಆಕೆಯ ಅವಿವಾಹಿತ ಸಹೋದರ ಅಥವಾ ಅವಿವಾಹಿತ ಸಹೋದರಿ ಅಥವ ವಿಧವಾ ಸಹೋದರಿ. | "ಮೃತ ನೌಕರನ ಅವಲಂಬಿತ" ಎಂದರೆ, ನಿಗಮದ ಮೃತ ನೌಕರನೊಂದಿಗೆ ವಾಸವಾಗಿದ್ದ ಮತ್ತು ಆತನಿಗೆ ಅವಲಂಬಿತರಾಗಿದ್ದ ಮತ್ತು 4ನೇ ನಿಯಮದ (1)ನೇ ಉಪನಿಯಮದ ವಿವರಣೆಗಳಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪೂರೈಸಿರುವ ಆತನ ಕುಟುಂಬದ ಸದಸ್ಯರು. |
| 2(ಬಿ) | ಕುಟುಂಬ ಎಂದರೆ ನಿಗಮದ ಮೃತ ನೌಕರನು ಕಾನೂನಿನ ರೀತ್ಯಾ ಮದುವೆಯಾದ ಪತಿ/ಪತ್ನಿ ಮತ್ತು ಆತ/ಆಕೆಯೊಂದಿಗೆ ವಾಸವಾಗಿದ್ದ ಆತನ/ಆಕೆಯ ಮಗ(ವಿವಾಹಿತ/ಅವಿವಾಹಿತ), ಅವಿವಾಹಿತ ಮಗಳು ಅಥವಾ ವಿಧವಾ ಮಗಳು, ಅವಿವಾಹಿತ ಸಹೋದರ, ಅವಿವಾಹಿತ ಅಥವಾ ವಿಧವಾ ಸಹೋದರಿ. | ಈ ನಿಯಮಗಳ ಉದ್ದೇಶಕ್ಕಾಗಿ "ಕುಟುಂಬ" ಎಂದರೆ:–<br>i. ಮೃತ ಪುರುಷ ವಿವಾಹಿತ ನಿಗಮದ ನೌಕರನ ಸಂದರ್ಭದಲ್ಲಿ, ಆತನ ಮೇಲೆ ಅವಲಂಬಿತರಾಗಿದ್ದ ಮತ್ತು ಆತನೊಂದಿಗೆ ವಾಸವಾಗಿದ್ದ ಆತನ ವಿಧವಾ ಪತ್ನಿ, ಮಗ ಮತ್ತು ಮಗಳು (ಅವಿವಾಹಿತ/**ವಿವಾಹಿತ/ವಿಚ್ಛೇದಿತ**/ವಿಧವೆ):<br>ii. ಮೃತ ಮಹಿಳಾ ವಿವಾಹಿತ ನಿಗಮದ ನೌಕರಳ ಸಂದರ್ಭದಲ್ಲಿ, ಆಕೆಯ ಮೇಲೆ ಅವಲಂಬಿತರಾಗಿದ್ದ ಮತ್ತು ಆಕೆಯೊಂದಿಗೆ ವಾಸವಾಗಿದ್ದ ಆಕೆಯ ಮಗ, ಮಗಳು (ಅವಿವಾಹಿತ/**ವಿವಾಹಿತ/ವಿಚ್ಛೇದಿತ**/ವಿಧವೆ) ಮತ್ತು ವಿಧುರ ಪತಿ:<br>iii. ಮೃತ ಪುರುಷ ಅವಿವಾಹಿತ ನಿಗಮದ ನೌಕರನ ಸಂದರ್ಭದಲ್ಲಿ, ಆತನ ಮೇಲೆ ಅವಲಂಬಿತರಾಗಿದ್ದ ಮತ್ತು ಆತನೊಂದಿಗೆ ವಾಸವಾಗಿದ್ದ ಆತನ ಸಹೋದರ ಅಥವಾ ಸಹೋದರಿ. |

| ನಿಯಮ/ ಉಪನಿಯಮ | ಹಾಲಿ ಚಾಲ್ತಿಯಲ್ಲಿರುವುದು | ತಿದ್ದುಪಡಿಯಾಗಿರುವುದು |
|---|---|---|
| | | iv. ಮೃತ ಮಹಿಳಾ ಅವಿವಾಹಿತ ನಿಗಮದ ನೌಕರಳ ಸಂದರ್ಭದಲ್ಲಿ, ಆಕೆಯ ಮೇಲೆ ಅವಲಂಬಿತರಾಗಿದ್ದ ಮತ್ತು ಆಕೆಯೊಂದಿಗೆ ವಾಸವಾಗಿದ್ದ ಆಕೆಯ ಸಹೋದರ ಅಥವಾ ಸಹೋದರಿ.<br>v. ಮೃತ ವಿವಾಹಿತ ನಿಗಮದ ನೌಕರನ/ಳ ಪತ್ನಿ/ಪತಿ ಈಗಾಗಲೇ ನಿಧನರಾಗಿದ್ದು ಮತ್ತು ಆತ/ಆಕೆಯ ಅಪ್ರಾಪ್ತ ವಯಸ್ಕ ಮಕ್ಕಳಿದ್ದಾಗ ಸಂಬಂಧಿತ ಕಾನೂನಿನ ಉಪಬಂಧಗಳನ್ವಯ ಅವರೊಂದಿಗೆ ವಾಸಿಸುವ ಹಾಗೂ ಅವರನ್ನು ಪೋಷಿಸುವ ಪ್ರಮಾಣೀಕೃತ ಪೋಷಕರು; |
| 3(2) | ಈ ನಿಬಂಧನೆಗಳಿಗೆ ಅನುಗುಣವಾಗಿ ಮೃತ ನೌಕರನ ಅವಲಂಬಿತರನ್ನು ಈ ಕೆಳಗೆ ತಿಳಿಸಿರುವ ಆದ್ಯತೆಯ ಆಧಾರದಲ್ಲಿ ಮಾತ್ರ ನೇಮಕಾತಿಗೆ ಪರಿಗಣಿಸತಕ್ಕದ್ದು:-<br>(ಎ) ಮಗ;<br>(ಬಿ) ಅವಿವಾಹಿತ ಮಗಳು ಅಥವಾ ವಿಧವಾ ಮಗಳು<br>(ಸಿ) ವಿಧವೆ/ವಿಧುರ, ಒಂದು ವೇಳೆ ಇವರಿಗೆ ಮಗ ಅಥವಾ ಅವಿವಾಹಿತ ಮಗಳು ಅಥವಾ ವಿಧವಾ ಮಗಳು ಇಲ್ಲದಿದ್ದಲ್ಲಿ, ಅಥವಾ ಸಮುಚಿತ ಕಾರಣಕ್ಕಾಗಿ ಇವರು ನೇಮಕಾತಿಯನ್ನು ಒಪ್ಪದಿದ್ದಲ್ಲಿ | ಈ ನಿಬಂಧನೆಗಳಿಗೆ ಅನುಗುಣವಾಗಿ ಮೃತ ನೌಕರನ ಅವಲಂಬಿತರನ್ನು ಈ ಕೆಳಗೆ ತಿಳಿಸಿರುವ ಆದ್ಯತೆಯ ಆಧಾರದಲ್ಲಿ ಮಾತ್ರ ನೇಮಕಾತಿಗೆ ಪರಿಗಣಿಸತಕ್ಕದ್ದು:-<br>(i) ಮೃತ ಪುರುಷ ವಿವಾಹಿತ ನಿಗಮದ ನೌಕರನ ಸಂದರ್ಭದಲ್ಲಿ ಆತನಿಗೆ ಅವಲಂಬಿತರಾಗಿದ್ದ ಮತ್ತು ಆತನೊಂದಿಗೆ ವಾಸವಾಗಿದ್ದ:-<br>(ಎ) ವಿಧವಾ ಪತ್ನಿ ಮತ್ತು<br>(ಬಿ) ಮೃತನ ವಿಧವಾ ಪತ್ನಿಯು ನೇಮಕಾತಿಗಾಗಿ ಅರ್ಹಳಿಲ್ಲದಿದ್ದಲ್ಲಿ ಅಥವಾ ಸಮುಚಿತ ಕಾರಣಕ್ಕಾಗಿ ಅವಳು ನೇಮಕಾತಿಯನ್ನು ಒಪ್ಪದಿದ್ದಲ್ಲಿ, ಮೃತ ನಿಗಮದ ನೌಕರನ ವಿಧವಾ ಪತ್ನಿಯು ಆಯ್ಕೆ ಮಾಡಿದ ಆತನ ಮಗ ಅಥವಾ ಮಗಳು.<br>**<u>ಟಿಪ್ಪಣಿ</u>:** ಮೃತ ನಿಗಮದ ನೌಕರನ ಪತ್ನಿಯು ಆತನಿಗೂ ಮೊದಲೇ ಮೃತಪಟ್ಟಿದ್ದಲ್ಲಿ, ಮಕ್ಕಳ ವಯಸ್ಸಿಗನುಗುಣವಾಗಿ ಆದ್ಯತೆಯನ್ನು ನೀಡತಕ್ಕದ್ದು.<br>(ii) ಮೃತ ಮಹಿಳಾ ವಿವಾಹಿತ ನಿಗಮದ ನೌಕರನ ಸಂದರ್ಭದಲ್ಲಿ ಆಕೆಗೆ ಅವಲಂಬಿತರಾಗಿದ್ದ ಮತ್ತು ಆತನೊಂದಿಗೆ ವಾಸವಾಗಿದ್ದ:-<br>(ಎ) ಮೃತ ನಿಗಮದ ನೌಕರಳ ವಿಧುರ ಪತಿಯು ಆಯ್ಕೆ ಮಾಡಿದ ಮಗ ಅಥವಾ ಮಗಳು ಮತ್ತು<br>(ಬಿ) ಮಗ ಅಥವಾ ಮಗಳು ಅರ್ಹರಿಲ್ಲದಿದ್ದಲ್ಲಿ ಅಥವಾ ಯಾವುದೇ ಸಮುಚಿತ ಕಾರಣಕ್ಕಾಗಿ ನೇಮಕಾತಿಯನ್ನು ಒಪ್ಪದಿದ್ದಲ್ಲಿ, ಆಕೆಯ ವಿಧುರ ಪತಿ.<br>**<u>ಟಿಪ್ಪಣಿ</u>:** ಮೃತ ನಿಗಮದ ನೌಕರಳ ಪತಿಯು ಆಕೆಗೂ ಮೊದಲೇ ಮೃತಪಟ್ಟಿದ್ದಲ್ಲಿ, ಮಕ್ಕಳ ವಯಸ್ಸಿಗನುಗುಣವಾಗಿ ಆದ್ಯತೆಯನ್ನು ನೀಡತಕ್ಕದ್ದು. |
| 3(2) | (i) ನಿಗಮದ ಮೃತ ಪುರುಷ ನೌಕರನು ಅವಿವಾಹಿತನಾಗಿದ್ದಲ್ಲಿ:-<br>ಆತನಿಗೆ ಅವಲಂಬಿತರಾಗಿದ್ದ ಮತ್ತು ಆತನೊಂದಿಗೆ ವಾಸವಾಗಿದ್ದ;<br>(ಎ) ಅವಿವಾಹಿತ ಸಹೋದರ.<br>(ಬಿ) ಅವಿವಾಹಿತ ಅಥವಾ ವಿಧವಾ ಸಹೋದರಿ | (iii) ಮೃತ ಪುರುಷ ಅವಿವಾಹಿತ ನಿಗಮದ ನೌಕರನ ಸಂದರ್ಭದಲ್ಲಿ, ಆತನಿಗೆ ಅವಲಂಬಿತರಾಗಿದ್ದ ಮತ್ತು ಆತನೊಂದಿಗೆ ವಾಸವಾಗಿದ್ದ ಆತನ ತಂದೆ ಅಥವಾ ತಾಯಿಯು ಆಯ್ಕೆ ಮಾಡಿದ ಅಥವಾ ಅವರ ಆಯ್ಕೆಯಲ್ಲಿ ಭಿನ್ನಾಭಿಪ್ರಾಯವಿದ್ದಲ್ಲಿ, ಆತನ ತಾಯಿಯು ಆಯ್ಕೆ ಮಾಡಿದ ಸಹೋದರ ಅಥವಾ ಸಹೋದರಿ; |

| ನಿಯಮ/ ಉಪನಿಯಮ | ಹಾಲಿ ಚಾಲ್ತಿಯಲ್ಲಿರುವುದು | ತಿದ್ದುಪಡಿಯಾಗಿರುವುದು |
|---|---|---|
| | | **<u>ಟಿಪ್ಪಣಿ:</u>** ಮೃತ ನಿಗಮದ ನೌಕರನ ತಂದೆ/ತಾಯಿ ಆತನಿಗೂ ಮೊದಲೇ ಮೃತಪಟ್ಟಿದ್ದಲ್ಲಿ, ಸಹೋದರ/ಸಹೋದರಿಯ ವಯಸ್ಸಿಗನುಣವಾಗಿ ಆದ್ಯತೆಯನ್ನು ನೀಡತಕ್ಕದ್ದು. |
| 3(2) | (ii) ನಿಗಮದ ಮೃತ ಮಹಿಳಾ ನೌಕರಳು ಅವಿವಾಹಿತಳಾಗಿದ್ದಲ್ಲಿ:- <br> ಆಕೆಗೆ ಅವಲಂಬಿತರಾಗಿದ್ದ ಮತ್ತು ಆಕೆಯೊಂದಿಗೆ ವಾಸವಾಗಿದ್ದ; <br> (ಎ) ಅವಿವಾಹಿತ ಸಹೋದರ. <br> (ಬಿ) ಅವಿವಾಹಿತ ಅಥವಾ ವಿಧವಾ ಸಹೋದರಿ | (iv) ಮೃತ ಮಹಿಳಾ ಅವಿವಾಹಿತ ನಿಗಮದ ನೌಕರಳ ಸಂದರ್ಭದಲ್ಲಿ, ಆಕೆಗೆ ಅವಲಂಬಿತರಾಗಿದ್ದ ಮತ್ತು ಆಕೆಯೊಂದಿಗೆ ವಾಸವಾಗಿದ್ದ ಆಕೆಯ ತಂದೆ ಅಥವಾ ತಾಯಿಯು ಆಯ್ಕೆ ಮಾಡಿದ ಅಥವಾ ಅವರ ಆಯ್ಕೆಯಲ್ಲಿ ಭಿನ್ನಾಭಿಪ್ರಾಯವಿದ್ದಲ್ಲಿ, ಆಕೆಯ ತಾಯಿಯು ಆಯ್ಕೆ ಮಾಡಿದ ಸಹೋದರ ಅಥವಾ ಸಹೋದರಿ; <br> **<u>ಟಿಪ್ಪಣಿ:</u>** ಮೃತ ನಿಗಮದ ನೌಕರಳ ತಂದೆ/ತಾಯಿ ಆಕೆಗೂ ಮೊದಲೇ ಮೃತಪಟ್ಟಿದ್ದಲ್ಲಿ, ಸಹೋದರ/ಸಹೋದರಿಯ ವಯಸ್ಸಿಗನುಣವಾಗಿ ಆದ್ಯತೆಯನ್ನು ನೀಡತಕ್ಕದು. |
| 3(2) | - | (v) ಮೃತ ವಿವಾಹಿತ ನಿಗಮದ ನೌಕರನ/ಳ ಪತ್ನಿ/ಪತಿ ಈಗಾಗಲೇ ಮೃತಪಟ್ಟಿದ್ದು ಮತ್ತು ಅವರಿಗೆ ಅಪ್ರಾಪ್ತ ವಯಸ್ಕ ಮಕ್ಕಳಿದ್ದ ಸಂದರ್ಭದಲ್ಲಿ, ಸಂಬಂಧಿತ ಕಾನೂನಿನ ಉಪಬಂಧಗಳನ್ವಯ ಆ ಮಕ್ಕಳೊಂದಿಗೆ ವಾಸಿಸುವ ಹಾಗೂ ಅವರನ್ನು ಪೋಷಿಸುವ ಪ್ರಮಾಣಿಕೃತ ಪೋಷಕರು. |
| 3(3) | ಇನ್ನಾವುದೇ ಇತರ ನಿಯಮ ಅಥವಾ ನಿಬಂಧನೆಗಳಲ್ಲಿ ಏನೇ ಇದ್ದರೂ, ಮೃತ ನಿಗಮ ನೌಕರನ/ಳ ದತ್ತು ಪುತ್ರ ಅಥವಾ ಪುತ್ರಿಯು ಈ ನಿಯಮಾವಳಿಗಳ ಅಡಿಯಲ್ಲಿ ನೇಮಕಾತಿಗೆ ಅರ್ಹರಾಗಿರುವುದಿಲ್ಲ. | ಈ ಉಪ ನಿಯಮವನ್ನು ಕೈಬಿಡಲಾಗಿದೆ. |
| 3ಎ | **<u>ಶಾಶ್ವತ ಅಸಮರ್ಥತೆಯಿಂದಾಗಿ ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ನಿಗಮದ ನೌಕರರ ಅವಲಂಬಿತರ ನೇಮಕಾತಿ:</u>** <br> ಶಾಶ್ವತ ಅಸಮರ್ಥತೆಯಿಂದಾಗಿ ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರರ ಅವಲಂಬಿತರು ಈ ನಿಯಮಗಳ ವ್ಯಾಪಕತೆಗೆ ಹಾನಿ ಉಂಟು ಮಾಡದಂತೆ, ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಕಂಪದ ಆಧಾರದ ಮೇಲೆ ನೇಮಕಾತಿ ಹೊಂದಲು ಅರ್ಹರಾಗುತ್ತಾರೆ, ಅಂದರೆ:- <br> ಎ) ಶಾಶ್ವತ ಅಸಮರ್ಥತೆಯು ವಾಸ್ತವಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಉಂಟಾಗಿರಬೇಕಾಗುತ್ತದೆ/ನಿಗಮದ ನೌಕರನು ವಹಿಸಿದ ಹುದ್ದೆಯ ಕರ್ತವ್ಯಗಳನ್ನು ನಿರ್ವಹಿಸುವಾಗ ಉಂಟಾಗಿರಬೇಕಾಗುತ್ತದೆ. <br> ಬಿ) ಅದು ಸಾರ್ವಜನಿಕ ಸೇವೆಯ ಮೇಲೆ ಕರ್ತವ್ಯದ ಮೇಲಿರುವಾಗ/ಹುದ್ದೆಗೆ ಸಂಬಂಧಿಸಿದ ಕರ್ತವ್ಯಗಳನ್ನು ನಿರ್ವಹಿಸುವಾಗ ಉಂಟಾಗಿರಬೇಕಾಗುತ್ತದೆ. <br> ಸಿ) 'ಕರ್ತವ್ಯದ ಮೇಲಿರುವಾಗ' ಎಂಬ ಪದಗಳು ಮನೆಯಿಂದ ಕರ್ತವ್ಯ ನಿರ್ವಹಿಸುವ ಸ್ಥಳಕ್ಕೆ ಹೋಗಿಬರುವ ಪ್ರಯಾಣವನ್ನು ಒಳಗೊಂಡಿರುತ್ತದೆ. | ನಿಯಮ 3ಎ ನ್ನು ರದ್ದುಗೊಳಿಸಲಾಗಿದೆ. |

| ನಿಯಮ/ ಉಪನಿಯಮ | ಹಾಲಿ ಚಾಲ್ತಿಯಲ್ಲಿರುವುದು | ತಿದ್ದುಪಡಿಯಾಗಿರುವುದು |
|---|---|---|
| 3ಎ | ಡಿ) ನಿಗಮದ ನೌಕರರು ದಿನಾಂಕ: 31.03.2006 ಕ್ಕಿಂತ ಮುನ್ನ ಸೇವೆಗೆ ಸೇರಿದ್ದರೆ, ಕವಿಮಂ ನೌಕರರ ಸೇವಾ ನಿಬಂಧನೆಗಳ ಅನ್ವಯ ಪಿಂಚಣಿ ಪಡೆಯಲು ಅರ್ಹರಾಗಿರುತ್ತಾರೆ.<br>ಇ) ನಿಗಮದ ನೌಕರನು ಯಾವುದೇ ಇತರೆ ಕರ್ತವ್ಯ ನಿರ್ವಹಿಸಲು ಅಸಮರ್ಥರಾಗಿರುವ ಬಗ್ಗೆ ವೈದ್ಯಕೀಯ ಮಂಡಳಿ ಪ್ರಮಾಣ ಪತ್ರ ಅವಶ್ಯಕವಾಗಿರುತ್ತದೆ.<br>ಪರಂತು, ನಿಗಮದ ನೌಕರನು ಕರ್ತವ್ಯ ನಿರ್ವಹಿಸುವ ಇಲಾಖೆಯ ಮುಖ್ಯಸ್ಥರು ಮೇಲಿನ ಎಲ್ಲಾ ಷರತ್ತುಗಳನ್ನು ಪರಿಶೀಲಿಸಿ, ನೌಕರನು ಕಚೇರಿ ಕರ್ತವ್ಯವನ್ನು ನಿರ್ವಹಿಸುವಾಗ ಉಂಟಾದ ಅಸಮರ್ಥತೆಯಿಂದಾಗಿ ಆತನ ಸೇವೆಗಳನ್ನು ಇಲಾಖೆಯ ಯಾವುದೇ ಇತರೆ ಹುದ್ದೆಯಲ್ಲಿ ಬಳಸಿಕೊಳ್ಳಲು ಸಾಧ್ಯವಿಲ್ಲವೆಂದು ಪ್ರಮಾಣೀಕರಿಸಿದಲ್ಲಿ ಮಾತ್ರ ಈ ನಿಯಮದನ್ವಯ ನಿಗಮವು ನಿಗಮದ ನೌಕರನ ಅವಲಂಬಿತರ ನೇಮಕಾತಿಯನ್ನು ಅಪರೂಪದ ಪ್ರಕರಣಗಳಲ್ಲಿ ಮಾಡಬಹುದಾಗಿರುತ್ತದೆ.<br>ಪರಂತು, ಯಾವುದೇ ನಿಗಮದ ನೌಕರನು ಈ ಕೆಳಕಂಡ ಕಾರಣಗಳಿಂದಾಗಿ ಉಂಟಾದ ಅಸಮರ್ಥತೆಯಿಂದಾಗಿ ಕವಿಮಂ ನೌಕರರ ಸೇವಾ ನಿಬಂಧನೆಗಳ ನಿಬಂಧನೆಗಳ ನಿಯಮ-206 ರ ಅನ್ವಯ ವಿಕಲತಾ ನಿವೃತ್ತಿ ವೇತನದ (Invalid Pension) ಸೌಲಭ್ಯದೊಂದಿಗೆ ವೈದ್ಯಕೀಯ ಕಾರಣಗಳ ಮೇಲೆ ಸೇವೆಯಿಂದ ನಿವೃತ್ತಿ ಹೊಂದಿದಲ್ಲಿ ಅಥವಾ ಕವಿಮಂ ನೌಕರರ ಸೇವಾ ನಿಬಂಧನೆಗಳ ನಿಬಂಧನೆಗಳ ನಿಯಮ-214 ರ ಅನ್ವಯ ನಿವೃತ್ತಿ ವೇತನ ಸೌಲಭ್ಯದೊಂದಿಗೆ ವೈದ್ಯಕೀಯ ಕಾರಣಗಳ ಮೇಲೆ ಸ್ವಯಂ ನಿವೃತ್ತಿ ಹೊಂದಿದಲ್ಲಿ ಅಂತಹ ನೌಕರರ ಅವಲಂಬಿತರು ಈ ನಿಯಮಗಳನ್ವಯ ಅನುಕಂಪದ ಆಧಾರದ ನೇಮಕಾತಿಗೆ ಅರ್ಹರಾಗುವುದಿಲ್ಲ:-<br>(ಅ) ಸಾಮಾನ್ಯ ಖಾಯಿಲೆ ಅಥವಾ ಯಾವುದೇ ಇತರೆ ಉಲ್ಬಣಗೊಳ್ಳುವ ಖಾಯಿಲೆ/ನ್ಯೂನ್ಯತೆಗಳು, ಇತ್ಯಾದಿ<br>(ಆ) ಕರ್ತವ್ಯದ ಮೇಲಿಲ್ಲದಿದ್ದಾಗ ಉಂಟಾಗುವ ಅಪಘಾತಗಳು/ಘಟನೆಗಳು. | |
| 4(1) | – | ಸದರಿ ಉಪ ನಿಯಮದಲ್ಲಿನ 'ವಿವರಣೆಯ' ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ;-<br>"ಪರಂತು, 1ನೇ ಉಪನಿಯಮದಲ್ಲಿ ಏನೇ ಇದ್ದರೂ, ಅದು ಗುಂಪು-ಸಿ ಮತ್ತು ಡಿ ಗೆ ಸೇರಿದ ನಿಗಮದ ನೌಕರರಿಗೆ ಅನ್ವಯವಾಗತಕ್ಕದ್ದಲ್ಲ." |

| ನಿಯಮ/ ಉಪನಿಯಮ | ಹಾಲಿ ಚಾಲ್ತಿಯಲ್ಲಿರುವುದು | ತಿದ್ದುಪಡಿಯಾಗಿರುವುದು |
|---|---|---|
| 4(2) | – | (2) ನೇ ಉಪ ನಿಯಮದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ;–<br>"ಪರಂತು, ಈ ನಿಯಮಗಳ ಅಡಿಯಲ್ಲಿ ನೇಮಕಾತಿಯನ್ನು ಕೋರುವ ಮೃತ ನಿಗಮದ ನೌಕರನ/ಳ ವಿಧವಾ ಪತ್ನಿ ಅಥವಾ ವಿಧುರ ಪತಿಗೆ ಈ ಮೇಲೆ ನಿರ್ದಿಷ್ಟಪಡಿಸಿರುವ ವಯೋಮಿತಿಯು ಅನ್ವಯವಾಗತಕ್ಕದಲ್ಲ. ಈ ಅವಲಂಬಿತರ ವಯೋಮಿತಿಯು ಅರ್ಜಿ ಸಲ್ಲಿಸುವ ಸಮಯದಲ್ಲಿ ಐವತ್ತೈದು ವರ್ಷಗಳನ್ನು ಮೀರತಕ್ಕದ್ದಲ್ಲ. |
| 5 | **ನೇಮಕಾತಿಗಾಗಿ ಅರ್ಜಿ:–** ಈ ನಿಯಮಗಳ ಮೇರೆಗೆ ನೇಮಕಾತಿಯನ್ನು ಕೋರುವ ಪ್ರತಿಯೊಬ್ಬ ಮೃತ ನಿಗಮದ ನೌಕರನ ಅವಲಂಬಿತನು, ನೌಕರನು ಮರಣ ಹೊಂದಿದ ದಿನಾಂಕದಿಂದ ಒಂದು ವರ್ಷದ ಒಳಗೆ ಕಾಲಕಾಲಕ್ಕೆ, ನಿಗಮವು ಅಧಿಸೂಚಿಸಬಹುದಾದಂತಹ ನಮೂನೆಯಲ್ಲಿ ಮೃತ ನಿಗಮದ ನೌಕರನು ಕಾರ್ಯನಿರ್ವಹಿಸುತ್ತಿದ್ದ ಇಲಾಖಾ ಮುಖ್ಯಸ್ಥರಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.<br>ಪರಂತು, ಅಪ್ರಾಪ್ತ ವಯಸ್ಕರಾದ ಸಂದರ್ಭದಲ್ಲಿ, ಅವನು/ಅವಳು ನಿಗಮದ ನೌಕರ ಮರಣ ಹೊಂದಿದ ದಿನಾಂಕದಿಂದ ಒಂದು ವರ್ಷದ ಒಳಗೆ ಹದಿನೆಂಟು ವರ್ಷಗಳನ್ನು ಪೂರೈಸಿರತಕ್ಕದ್ದು ಮತ್ತು ತದನಂತರ ಒಂದು ವರ್ಷಗಳೊಳಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು | **ನೇಮಕಾತಿಗಾಗಿ ಅರ್ಜಿ:–** ಈ ನಿಯಮಗಳ ಮೇರೆಗೆ ನೇಮಕಾತಿಯನ್ನು ಕೋರುವ ಪ್ರತಿಯೊಬ್ಬ ಮೃತ ನಿಗಮದ ನೌಕರನ/ಳ ಅವಲಂಬಿತನು, ನೌಕರನು/ಳು ಮರಣ ಹೊಂದಿದ ದಿನಾಂಕದಿಂದ ಒಂದು ವರ್ಷದ ಒಳಗೆ ಕಾಲಕಾಲಕ್ಕೆ, ನಿಗಮವು ಅಧಿಸೂಚಿಸಬಹುದಾದಂತಹ ನಮೂನೆಯಲ್ಲಿ ಮೃತ ನಿಗಮದ ನೌಕರನು/ಳು ಕಾರ್ಯನಿರ್ವಹಿಸುತ್ತಿದ್ದ ಇಲಾಖಾ ಮುಖ್ಯಸ್ಥರಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.<br>ಪರಂತು, ಅಪ್ರಾಪ್ತ ವಯಸ್ಕರಾದ ಸಂದರ್ಭದಲ್ಲಿ, ಅವನು/ಅವಳು ನಿಗಮದ ನೌಕರ ಮರಣ ಹೊಂದಿದ ದಿನಾಂಕದಿಂದ ಎರಡು ವರ್ಷಗಳ ಒಳಗೆ ಹದಿನೆಂಟು ವರ್ಷಗಳನ್ನು ಪೂರೈಸಿರತಕ್ಕದ್ದು ಮತ್ತು ತದನಂತರ ಎರಡು ವರ್ಷಗಳೊಳಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು. |
| 6 (6) | – | ಈ ನಿಯಮಗಳ ಅಡಿಯಲ್ಲಿ ನೇಮಕಾತಿಯನ್ನು ಅರ್ಜಿ ಸಲ್ಲಿಸಿದ ದಿನಾಂಕದಂದು ಚಾಲ್ತಿಯಲ್ಲಿರುವ ಉಪಬಂಧಗಳಿಗನುಸಾರವಾಗಿ ಮಾಡತಕ್ಕದ್ದು. |

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)